2. ಸದರೀ ಮ್ಯುನಿಸಿ ಪಾಲಿಟಿಯೊಳಗೆ ಭೇದಿಸುವದಕ್ಕೊಸ್ಕರ ತರಲ್ಪಡುವ ಪ್ರತಿ 3 ಕಾಸುಗಳ ಪ್ರಕಾರ ಸುಂಕ ಕಟ್ಟಲ್ಪಡತಕ್ಕದ್ದು.

ನಂ. 4. ತಾರೀಖು 7ನೇ ಜುಲೈ 1876.

ಲೆಪ್ಟನೆಂಟ್ ಕರ್ನಲ್ ಹೆಸ್ಸಿಯವರು ರವಿನ್ಯೂ ಸರ್ವೆ ಸೂಪರ್ಟೆಂಡೆಂಟರ ಆಫೀ ಪ್ರೈವೇಟ್ ಸೆಕ್ರೆಟರಿ ಯವರಿಂದ ಮಾಹೇ ಮಜಕೂರು 5ನೇ ಮುಕ್ತಂ ಮಧ್ಯಾನ್ಹ ತ್ಪರ ತೆಗದುಕೊಂಡರು.

ನಂ. 5. ತಾರೀಖು 13ನೇ ಜುಲೈ 187

ಕೊಡಗು ಮೈಸೂರು ಅಸಿಸ್ಟೆಂಟ್ ಕಮಿಷನರ್ ಮೇರಿಯಂದ ಪೂವೈಯ ಅಸಿಸ್ಟೆಂಟರಾಗಿ ಮೊಕರರ್ ಮಾಡಲ್ಪಟ್ಟು 1873ನೇ ಇಸವಿ 10ನೇ ನಂಬರ್ ಆಕ್ಟಿನ 23ನೇ ಸೆಕ್ಷನ್ (a) ಳಿಗೆ ನಮೂದಿಸಲ್ಪಡುವ ಜಾಸ್ತಿ ಅಧಿಕಾರಗಳು ಸಹಾ ಕೊಡಲ್ಪಟ್ಟಿರುತ್ತಾರೆ.

1. ಲಾಷ್ ದರಿಯಾಪ್ತಿ ಮಾಡತಕ್ಕ ಅಧಿಕಾರ (ಸೆಕ್ಷನ್ 35)

2. ವಿಚಾರಣೆ ಮಾಡಲಿಕ್ಕೆ ಅವರಿಗೆ ಅಧಿಕಾರವಿರುವ ವ್ಯಾಜ್ಯಗಳಲ್ಲಿ ತಕಸೀರುಗಳನ್ನು ಕುರಿತು ಮಾಡಲ್ಪಡುವ ಫಿರ್ಯಾದುಗಳನ್ನು ದಾಖಲ್ಮಾಡಿಕೊಳ್ಳತಕ್ಕ ಅಧಿಕಾರ (ಸೆಕ್ಷನ್ 141)

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretay.

ಇಂಡ್ಯಗವರ್ಮೆಂಟಿನವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್.

ಫಾರಿನ್ ಇಲಾಖೆ.

ತಾರೀಖು 30ನೇ ಜೂನ್ 1876, ಮೊಕ್ಕಾಂ ಸಿಂಮ್ಲಾ.

ನಂ. 1380 G—ಬಹಲ್—ಮೆಸ್ಟರ್ C. B. ಸಾಂಡರ್ಸ್ C. B. ಸಾಹೆಬರವರು ಮೈಸೂರು ವ ಕೊಡಗು ಚೀಫ್ ಕಮ್ಮಿಷನರಾಗಿ ಸದರೀ ಆಫಿಸ್ ಚಾರ್ಜ ವಹಿಸಿವ ತಾರೀಕು ಲಗಾಯತು ಮೊಕರರಿ.

T. H. THORNTON,
Offg. Secy. to the Govt. of India.

ಮಿಲಿಟೇರಿ ಇಲಾಖೆ.

ನಂ. 47. ಫೋರ್ಟ್ ವಿಲಿಯಂ, ತಾರೀಖು 5ನೇ ಜೂನ್ 1876.

ಅಡ್ಜುಟೆಂಟ್ ಜನರಲ್‌ಯವರಿಗೆ.

ಸಾಲ್ಯೂಟ್‌ಗಳ ವಿಷಯವಾದ, 1876ನೇ ಏಪ್ರೆಲ್ 27ನೇ ಮುಕ್ತಂ 653ನೇ B ಬಾಬತು ನಿಮ್ಮ ಲೆಟರಿಗೆ ಜವಾಬಾಗಿ, ಘನವನ್ನು ಹೊಂದಿದ. ಕಮಾಂಡರ್ ಇನ್‌ಚೀವ್‌ರವರ ಜಾಹಿರಾತೀ ಬಗ್ಯೆ ಶ್ರುತಪಡಿಸುವಂತೆ ನನಗೆ ಅಪ್ಪಣೆ ಆಗಿರುವದೇನಂದರೆ, ವ್ಯತಪಟ್ಟ ಒಬ್ಬ ನೇಟಿವ್ ಸಂಸ್ಥಾನಾಧಿಪತಿಯಕರೀರವಾಗಲೆ ಭಸ್ಮವಾಗಲೀ, ಬಂದು ಮಿಲಿಟೇರಿ ಲಷ್ಕರ್‌ಮಾರ್ಗವಾಗಿ ವಯ್ಯಲ್ಪಡುವ ದರೋಬಸ್ತು ಸಂದರ್ಭಗಳೊಳಗೂ, ಆಸ್ಥಾನಾಧಿಪತಿ ಜೀವಿಸಿಇದ್ದಾಗ ಗೌರವಾರ್ಥವಾಗಿ ಯಪ್ಪತ್ತು ಮಿನಿಟ್ ಗಳ ಯಾನೆ ನಿಮಿಷ ತೋಪ್‌ಗಳಿಗೆ ಅರ್ಹನಾಗಿದ್ದನೋ ಅಷ್ಟು ತೋಪ್‌ಗಳನ್ನು ಬದಸ್ತೂರ್ ಆಯಾಸ್ಟೇಷನ್ ಅಧಿಕಾರಿಗಳ ಅಪ್ಪಣೇಮೇರೆ ಉಡಾಯಿಸಲ್ಪಡತಕ್ಕದ್ದೆಂದು ಮಂತ್ರಾಲೋಚಕ ಸಭೆಯೊಳಗಣ ಘನವನ್ನು ಹೊಂದಿದ ಗವರ್ನರ್ ಜನರಲ್ ಸಾಹೆಬರವರು ನಿರ್ಣಯಿಸಿಯಿರುತ್ತಾರೆ.

ಹೀಗೆ ತಮ್ಮವಿಧೆಯನಾದ

ಆರ್ಟಜಾರ್ಸ್ ಕರ್ನಲ್.

ಆ॥ ಸೆ॥ ಗವರ್ಮೆಂಟ್ ಆಫ್ ಇಂಡ್ಯ.